ವಿಷಯ ತುಂಬಾ ಸೂಕ್ಷ್ಮದ್ದು. ಅಲ್ಲದೇ ಇವರ ಜಾಗದ ಪಕ್ಕದಲ್ಲಿ ಹಳ್ಳಿಯೊಂದು ಇತ್ತು. ಜಾಗದ ಸಂಪೂರ್ಣ ಹಕ್ಕುಪತ್ರ ಜೇಕೆ ಕಂಪನಿಯದೇ ಆಗಿದ್ದರೂ ಈ ಸಮಾಧಿಗಳು ಯಾರದ್ದು, ಅದನ್ನು ನೆಲಸಮ ಮಾಡಿದರೆ ಸಂಬಂಧ ಪಟ್ಟವರು ತಕರಾರು ತೆಗೆಯಬಹುದೇ? ಎನ್ನುವ ವಿಷಯಗಳೆಲ್ಲಾ ಚರ್ಚೆಗೆ ಬಂದಿದ್ದವು. ಆ ಸಂದರ್ಭದಲ್ಲಿ ರಾತ್ರೋರಾತ್ರಿ ಜೆಸಿಬಿ ಕರೆಸಿ, ಸಮಾಧಿಗಳನ್ನು ಒಡೆದು ಅಲ್ಲಿಂದ ಸಾಗಹಾಕುವುದರ ಮುಂದಾಳತ್ವವನ್ನು ವಹಿಸಿದವನು ಶಿವುನೇ. ಕಡಿಮೆ ರಿಸ್ಕಿನ ಕೆಲಸವಲ್ಲ ಅದು. ಸಿಕ್ಕಿಬಿದ್ದರೆ ಮುಖ ಮೂತಿ ಒಡೆಸಿಕೊಳ್ಳುವಂಥದ್ದು. ಮಧ್ಯರಾತ್ರಿಯಲ್ಲಿ, ಯಾವ ದೀಪವನ್ನೂ ಉರಿಸದೇ, ಸದ್ದು ಗದ್ದಲವಿಲ್ಲದೇ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರೈಸಿದ ಮೇಲೆ ಕಂಪನಿಯಲ್ಲಿ ಆತ ಸಮಾಧಿ ಶಿವು ಅಂತಲೇ ಫೇಮಸ್ ಆಗಿಬಿಟ್ಟ.

★★★

ಅರವಿಂದ ಜೇಕೆ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಸೇರಿ ಎರಡು ವರ್ಷಗಳಾಗುತ್ತಾ ಬಂತು. ಇದಕ್ಕಿಂತ ಮೊದಲು ಸುಮಾರು ಕಡೆ ಕೆಲಸ ಮಾಡಿ, ಬಿಟ್ಟಾಗಿದೆ. ಅವನ ವಿಚಾರ, ವಾದಗಳೇ ಬೇರೆ. ಎಲ್ಲಾ ಕಾರ್ಪೊರೇಟ್ ಕಂಪನಿಗಳದೂ ಒಂದೇ ಕಥೆ, ಅದರಲ್ಲಿ ಒಳ್ಳೆಯದು ಕೆಟ್ಟದು ಎನ್ನುವ ವಿಭಾಗ ಮಾಡಲು ಬರುವುದೇ ಇಲ್ಲ ಎನ್ನುತ್ತಾನಾತ. ಹೀಗಾಗಿ ಯಾವುದೇ ಕಂಪನಿ ಸೇರುವಾಗ ಅದರಮೇಲೊಂದು ಅಸಮಾಧಾನ ಇಟ್ಟುಕೊಂಡೇ ಪ್ರವೇಶಿಸುತ್ತಾನೆ.

ಆತ ಜೇಕೆ ಸರ್ ವ್ಯಕ್ತಿತ್ವವನ್ನು ಸಂಶಯದಿಂದಲೇ ನೋಡುವುದು. ಅವರು ಮೀಟಿಂಗುಗಳಲ್ಲಿ ಕಂಪನಿಯ ನೌಕರರೆಲ್ಲ ನನ್ನ ಕುಟುಂಬದ ಸದಸ್ಯರಿದ್ದಂತೆ ಎನ್ನುವುದೆಲ್ಲ ಒಂದು ಬೂಟಾಟಿಕೆ, ಕಾರ್ಪೊರೇಟ್ ಸ್ಟ್ರಾಟಜಿಯ ಒಂದು ಭಾಗ ಎಂಬುದು ಅವನ ಅಭಿಪ್ರಾಯ. 'ವರ್ಕ್ ಈಸ್ ವರ್ಶಿಪ್' ಎನ್ನುವ ನುಡಿಗಟ್ಟನ್ನು ಹುಟ್ಟುಹಾಕಿದ್ದೇ ಬಂಡವಾಳಶಾಹಿಗಳು. ಅದನ್ನು ಚಿಕ್ಕಂದಿನಿಂದಲೇ ಜನಮಾನಸದಲ್ಲಿ ಬಿತ್ತುವುದು ಅವರುಗಳ ಧೂರ್ತ ಅಜೆಂಡಾಗಳಲ್ಲೊಂದು ಎಂದು ಬಲವಾಗಿ ನಂಬಿದ್ದಾನೆ ಆತ. ಇಲ್ಲಿ ಘಟಿಸುವ ಪ್ರತಿಕ್ರಿಯೆಯ ಉದ್ದೇಶವೂ ಅಂತಿಮವಾಗಿ ಯಾವುದೋ ಒಬ್ಬ ಬಂಡವಾಳದಾರನ ಜೇಬು ತುಂಬುವುದೇ ಆಗಿರುತ್ತದೆ. ಯಾವುದೇ ಕಂಪನಿ ನೌಕರನೊಬ್ಬನಿಂದ ತಾನು ಕೊಡುವ ಸಂಬಳದ ಎರಡು ಮೂರು ಪಟ್ಟು ಕೆಲಸ ತೆಗೆದುಕೊಳ್ಳುತ್ತದೆ. ಅಲ್ಲದೇ, 'ನೀನು ಮಾಡುತ್ತಿರುವುದು ಸಾಲುತ್ತಿಲ್ಲ' ಎಂಬುದನ್ನು ಹಲವು ರೂಪದಲ್ಲಿ ಹೇಳುತ್ತಾ, ಒಂದು ಸಣ್ಣ ಅಪರಾಧಿಪ್ರಜ್ಞೆಯನ್ನು ಬಿತ್ತುತ್ತಲೆ, 'ಮಾಡದಿದ್ದರೆ ನಿನಗಿಲ್ಲಿ ಜಾಗವಿಲ್ಲ' ಎಂಬ ಭಯವನ್ನೂ ಸೃಷ್ಟಿಸುತ್ತದೆ. ಆದರೂ ಪ್ರತಿ ನೌಕರ ಕಂಪನಿಯಿಂದಲೇ ತಾನು ಉಪಕೃತನಾಗಿದ್ದೇನೆ ಎನ್ನುವ ಭಾವನೆಯಲ್ಲೇ ಬದುಕುತ್ತಾನೆ. ಇದೇ ಕಾರ್ಪೊರೇಟ್ ಸಂಸ್ಕೃತಿಯ ಯಶಸ್ಸಿಗೆ ಕಾರಣ ಎಂಬುದು ಅರವಿಂದನ ವಾದ.

ಜೇಕೆ ಸರ್ ಹಲವಾರು ಬಾರಿ ಸಹನೆ ಕಳೆದುಕೊಂಡು ಇತರರ ಮೇಲೆ ರೇಗಾಡಿದ್ದನ್ನು ಆತ ನೋಡಿದ್ದಾನೆ. ಅವರದು ಮೂಗಿನ ಮೇಲೆಯೇ ಕೋಪ, ಆದರೆ ಅದು ತುಸು ಹೊತ್ತು ಮಾತ್ರ ಎಂಬುದು ಹಲವರ ನಂಬಿಕೆಯಾದರೆ, ಕೋಪ ಅಹಂಕಾರಗಳೇ ಜೇಕೆಯ ನಿಜವಾದ ಮುಖ, ಉಳಿದದ್ದೆಲ್ಲ ಮುಖವಾಡ ಎಂಬುದು ಅರವಿಂದನ ಅನಿಸಿಕೆ. ಆದರೆ ಅದನ್ನು ಯಾರಿಗಾದರೂ ಹೇಳುವುದಾಗಲೀ, ಎಲ್ಲರೆದುರು ವ್ಯಕ್ತಪಡಿಸುವುದಾಗಲೀ ಸಾಧ್ಯವಿರಲಿಲ್ಲ ಆತನಿಗೆ. ಈ ವ್ಯವಸ್ಥೆಯಲ್ಲಿ ನಾನೂ ಒಬ್ಬ ಬಲಿಪಶು. ಇದೊಂಥರಾ ಸತ್ತೂ ಹೋಗದ, ತಪ್ಪಿಸಿಕೊಳ್ಳಲೂ ಆಗದ ಚಕ್ರವ್ಯೂಹ. ಇದರಿಂದ ಹೊರಬರಬರುವ ಧೈರ್ಯ ಗಟ್ಟಿತನ ತನಗಿಲ್ಲವಾದ್ದರಿಂದ ನೌಕರಿ ಅನಿವಾರ್ಯವೆಂಬ ಅರಿವು ಹಾಗೂ ನೋವು ಎರಡೂ ಇತ್ತು ಆತನಿಗೆ. ಇಲ್ಲೂ ಇರಲಾರೆ ಅಲ್ಲೂ ಹೋಗಲಾರೆ ಎನ್ನುವ ಅಸಹಾಯಕತೆಯಲ್ಲೇ, ದಿನಾ ಬೆಳಿಗ್ಗೆ ಎದ್ದು ಆಫೀಸಿಗೆ ಹೋಗುವಾಗ 'ಯಾಕಾದರೂ